NOVEMBER 14, 2025

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಮುಖ್ಯಾಂಶಗಳು

<><><>

- 72ನೇ ಅಖಿಲ ಭಾರತ ಸಹಕಾರಿ ಸಪ್ತಾಹಕ್ಕೆ, ಇಂದು, ಬೆಂಗಳೂರಿನಲ್ಲಿ, ಮುಖ್ಯಮಂತ್ರಿ ಚಾಲನೆ.
- 'ಪ್ರತಿಯೊಂದು ಮಗುವಿಗೂ, ಎಲ್ಲ ಹಕ್ಕು' ಧ್ಯೇಯದೊಂದಿಗೆ, ಇಂದು, 'ಮಕ್ಕಳ ದಿನಾಚರಣೆ.
- ಸರ್ದಾರ ವಲ್ಲಭಭಾಯಿ ಪಟೇಲ ಅವರ, 150ನೇ ಜಯಂತ್ಯುತ್ಸವ; ಇಂದು ಮತ್ತು ನಾಳೆ, ಬೀದರ್‌ನಲ್ಲಿ 'ಏಕತಾ ನಡಿಗೆ'.
- ಕೇಂದ್ರದ, ನೀತಿ ಆಯೋಗದಿಂದ, ಕಲಬುರಗಿ ಜಿಲ್ಲಾಧಿಕಾರಿ ಬಿ. ಫೌಜಿಯಾ ತರನ್ನುಮ್ ಅವರಿಗೆ, ಪ್ರಶಂಸಾ ಪತ್ರ.

<><><>

ಈಗ ವಾರ್ತೆಗಳ ವಿವರ

<><><>

ಸಹಕಾರ ಕ್ಷೇತ್ರದ ಬೆಳವಣಿಗೆಗಾಗಿ, ಪ್ರತಿ ವರ್ಷ ನವೆಂಬರ್ 14 ರಿಂದ 20ರ ವರೆಗೆ, ಅಖಿಲ ಭಾರತ, ಸಹಕಾರಿ ಸಪ್ತಾಹವನ್ನು, ಆಚರಿಸಲಾಗುತ್ತದೆ. ಈ ಬಾರಿ, 72ನೇ ಅಖಿಲ ಭಾರತ ಸಹಕಾರಿ ಸಪ್ತಾಹವನ್ನು, 'ಆತ್ಮ ನಿರ್ಭರ ಭಾರತ; ಸಹಕಾರಿ ಸಂಸ್ಥೆಗಳು ಚಾಲಕಗಳು' ಎಂಬ ಧ್ಯೇಯದೊಂದಿಗೆ, ರಾಜ್ಯಾದ್ಯಂತ ಏಳು ದಿನಗಳ ಕಾಲ, ವಿವಿಧ ಧ್ಯೇಯಗಳೊಂದಿಗೆ ನಡೆಯಲಿದೆ. 'ಸಹಕಾರಿ ಕ್ಷೇತ್ರದಲ್ಲಿ, ಕಾರ್ಯದಕ್ಷತೆ, ಉತ್ತರದಾಯಿತ್ವ ಮತ್ತು ಪಾರದರ್ಶಕತೆಯನ್ನು ಹೆಚ್ಚಿಸಲು, ಡಿಜಿಟಲೀಕರಣವನ್ನು ಪ್ರೋತ್ಸಾಹಿಸುವುದು', ಎಂಬ ಉದ್ದೇಶದೊಂದಿಗೆ, ಇಂದು ಬೆಳಗ್ಗೆ 11 ಗಂಟೆಗೆ, ಬೆಂಗಳೂರಿನ ಅರಮನೆ ಮೈದಾನದಲ್ಲಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಸಹಕಾರ ಸಪ್ತಾಹವನ್ನು ಉದ್ಘಾಟಿಸಲಿದ್ದಾರೆ.

<><><>

ರಾಜ್ಯ ಸಹಕಾರಿ ಮಹಾ ಮಂಡಳದ ಅಧ್ಯಕ್ಷ ಹಾಗೂ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ, ಜಿ.ಟಿ. ದೇವೇಗೌಡ ಅವರು, ಬೆಂಗಳೂರಿನಲ್ಲಿ ಮಾತನಾಡಿ, ರಾಜ್ಯದಲ್ಲಿ, 47 ಸಾವಿರ ಸಹಕಾರ ಸಂಸ್ಥೆಗಳು, ಕಾರ್ಯನಿರ್ವಹಿಸುತ್ತಿವೆ. 2 ಕೋಟಿ 72 ಲಕ್ಷ ಜನ ಸದಸ್ಯರಿದ್ದಾರೆ. ದೇಶದಲ್ಲಿ, 8 ಲಕ್ಷದ 50 ಸಾವಿರ, ಸಹಕಾರ ಸಂಸ್ಥೆಗಳಿದ್ದು, 31 ಕೋಟಿ ಜನ ಸಹಕಾರಿಗಳಿದ್ದಾರೆ ಎಂದರು. ಸಹಕಾರ ಚಳವಳಿಯ ನೇತೃತ್ವ ವಹಿಸಿದ್ದ, ದಿವಂಗತ ಬಿ.ಎಸ್. ವಿಶ್ವನಾಥ ಅವರ, ಕಂಚಿನ ಪುತ್ಥಳಿಯನ್ನು, ಸಹಕಾರ ಮಹಾ ಮಂಡಳದ ಮುಂಭಾಗದಲ್ಲಿ, ಇಂದು ಮುಖ್ಯಮಂತ್ರಿ ಅನಾವರಣಗೊಳಿಸಲಿದ್ದಾರೆ ಎಂದು ತಿಳಿಸಿದರು.

<><><>

ಬಾಗಲಕೋಟೆ ಜಿಲ್ಲೆ, ರಬಕವಿ–ಬನಹಟ್ಟಿ ತಾಲೂಕಿನ ಸಮೀರವಾಡಿಯಲ್ಲಿ, ಗೋದಾವರಿ ಬಯೋ ರಿಫೈನರಿ ಸಕ್ಕರೆ ಕಾರ್ಖಾನೆಯ, ಕಬ್ಬು ಗೊದಾಮಿನಲ್ಲಿ ನಿಂತಿದ್ದ, 50ಕ್ಕೂ ಹೆಚ್ಚು ಟ್ರ್ಯಾಕ್ಟರ್ ಟ್ರಾಲಿಗಳಿಗೆ, ಕಿಡಿಗೇಡಿಗಳು ಬೆಂಕಿ ಹಚ್ಚಿದ್ದಾಗಿ ವರದಿಯಾಗಿದೆ. ಈ ಸಂದರ್ಭದಲ್ಲಿ, ಕಬ್ಬು ಬೆಳೆಗಾರರು, ಕಬ್ಬಿಗೆ ಯೋಗ್ಯ ಬೆಲೆ ನೀಡುವಂತೆ ಆಗ್ರಹಿಸಿ, ಸಮೀರವಾಡಿ ಸಕ್ಕರೆ ಕಾರ್ಖಾನೆಗೆ ಮುತ್ತಿಗೆ ಹಾಕಲು ಹೊರಟಿದ್ದರು, ಎನ್ನಲಾಗಿದೆ. ಅಗ್ನಿ ಶಾಮಕ ದಳದ ಸಿಬ್ಬಂದಿ, ಸ್ಥಳಕ್ಕೆ ಧಾವಿಸಿ, ಬೆಂಕಿ ನಂದಿಸಲು, ಹರಸಾಹಸ ಪಟ್ಟರು.

<><><>

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಬಾಗಲಕೋಟೆ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪುರ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ಧಾರ್ಥ ಗೋಯಲ್ ಅವರಿಗೆ ಕರೆ ಮಾಡಿ, ಘಟನೆ ಕುರಿತು ಮಾಹಿತಿ ಪಡೆದಿದ್ದಾರೆ.

<><><>

ಕಾನೂನು–ಸುವ್ಯವಸ್ಥೆ ಕಾಪಾಡಲು, ಬಾಗಲಕೋಟೆ ಜಿಲ್ಲಾಧಿಕಾರಿ ಸಂಗಪ್ಪ, ಜಮಖಂಡಿ, ಮುಧೋಳ, ರಬಕವಿ–ಬನಹಟ್ಟಿ ತಾಲೂಕುಗಳಲ್ಲಿ, ಭಾರತೀಯ ನ್ಯಾಯ ಸಂಹಿತೆಯ, ಕಲಂ 164ರ ಅಡಿ, ನಿಷೇಧಾಜ್ಞೆ ಜಾರಿಗೊಳಿಸಿ, ಆದೇಶಿಸಿದ್ದಾರೆ.

<><><>

ಸ್ವತಂತ್ರ ಭಾರತದ ಪ್ರಥಮ ಪ್ರಧಾನಮಂತ್ರಿ, ಪಂಡಿತ ಜವಹರಲಾಲ ನೆಹರೂ ಅವರ, 136ನೇ ಜನ್ಮ ದಿನವಾದ ಇಂದು, 'ಮಕ್ಕಳ ದಿನ'ವನ್ನಾಗಿ ಆಚರಿಸಲಾಗುತ್ತಿದೆ. 'ಪ್ರತಿಯೊಂದು ಮಗುವಿಗೂ, ಎಲ್ಲ ಹಕ್ಕು' ಎಂಬ ಧ್ಯೇಯದೊಂದಿಗೆ, ಮಕ್ಕಳ ಹಕ್ಕು, ಮಕ್ಕಳ ಶಿಕ್ಷಣ ಹಾಗೂ ಯೋಗಕ್ಷೇಮವನ್ನು ಖಾತ್ರಿಪಡಿಸಿ, ಅವರ ಬಾಲ್ಯವನ್ನು ಇನ್ನಷ್ಟು ಸುರಕ್ಷಿತ ಹಾಗೂ ಸುಂದರಗೊಳಿಸುವ ಸಂಕಲ್ಪ, ಹೊಂದಲಾಗಿದೆ. ಪಂಡಿತ ನೆಹರೂ ಅವರು, 'ಮಕ್ಕಳನ್ನು ನಮ್ಮ ಬದುಕೆಂಬ ಉದ್ಯಾನದ, ಸುಂದರ ಮೊಗ್ಗುಗಳು' ಎಂದು ಬಣ್ಣಿಸಿದ್ದರು. ಮಕ್ಕಳಿಂದ 'ಚಾಚಾ ನೆಹರೂ' ಎಂದೇ ಸಂಬೋಧಿತರಾದ, ಭಾರತ ರತ್ನ ಜವಹರಲಾಲ ನೆಹರೂ ಅವರ ಆಶಯಗಳನ್ನು ಗೌರವಿಸಿ, ಕೇಂದ್ರ ಸರ್ಕಾರ, ಹಲವು ಯೋಜನೆಗಳನ್ನು ಜಾರಿಗೊಳಿಸಿದೆ.

<><><>

ಮಕ್ಕಳ ಹಿತದೃಷ್ಟಿಯಿಂದ, ಸಮಗ್ರ ಶಿಶು ಅಭಿವೃದ್ಧಿ ಸೇವಾ ಯೋಜನೆ, ಮಧ್ಯಾಹ್ನದ ಬಿಸಿಯೂಟ ಯೋಜನೆ, ಶಿಕ್ಷಣ ಹಕ್ಕು ಕಾಯ್ದೆ–2009, 'ಬೇಟಿ ಬಚಾವೋ, ಬೇಟಿ ಪಢಾವೋ', ರಾಷ್ಟ್ರೀಯ ಬಾಲ ಕಾರ್ಮಿಕ ಯೋಜನೆ ಹಾಗೂ ಪ್ರಧಾನಮಂತ್ರಿ ಪೋಷಣ್ ಅಭಿಯಾನಕ್ಕೆ ಚಾಲನೆ ನೀಡಿದೆ.

<><><>

ಪಿ.ಎಂ. ಇ–ವಿದ್ಯಾ ಕಾರ್ಯಕ್ರಮದ ಮೂಲಕ, ರಾಷ್ಟ್ರೀಯ ಶಿಕ್ಷಣ ನೀತಿ–2020ರಡಿ, ಡಿಜಿಟಲ್ ವೇದಿಕೆ ಮೂಲಕ, ಪ್ರತಿಯೊಂದು ಮಗುವಿಗೂ, ಶಿಕ್ಷಣವನ್ನು ಖಾತ್ರಿಪಡಿಸಲು, ಭಾರತ ಸರ್ಕಾರ ಯೋಜಿಸಿದೆ.

<><><>

ಮಲೆನಾಡಿನ ಪ್ರಥಮ ಸಮುದಾಯ ಬಾನುಲಿ ಕೇಂದ್ರ, ರೇಡಿಯೊ ಶಿವಮೊಗ್ಗ 90.8 ಎಫ್.ಎಮ್., ಮಕ್ಕಳ ಶಿಕ್ಷಣಕ್ಕಾಗಿ ಮೀಸಲಿದ್ದು, ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗಾಗಿ ಕಾರ್ಯ ನಿರ್ವಹಿಸುತ್ತಿರುವ, ರಾಷ್ಟ್ರದ ಏಕೈಕ ಬಾನುಲಿ ಕೇಂದ್ರ. ಪಂಡಿತ ನೆಹರೂ ಅವರ ಜನ್ಮ ದಿನದ ಹಿನ್ನೆಲೆ, ಇಂದಿನ ಎಲ್ಲ ಕಾರ್ಯಕ್ರಮಗಳನ್ನು, 25ಕ್ಕೂ ಹೆಚ್ಚು ಮಕ್ಕಳು, ನಡೆಸಿ ಕೊಡಲಿದ್ದಾರೆ. 'ನಮ್ಮ ರೇಡಿಯೊ ಆ್ಯಪ್'

ಮೂಲಕ, 176 ದೇಶಗಳ 60 ಸಾವಿರ ಕೇಳುಗರನ್ನು, ಈ ಆರ್.ಜೆ.ಗಳು ತಲುಪಲಿದ್ದಾರೆ. ಈ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ರೇಡಿಯೊ ಶಿವಮೊಗ್ಗ 90.8 ಎಫ್.ಎಮ್. ನಿರ್ದೇಶಕ, ಜಿ.ಎಲ್.ಜನಾರ್ದನ.

<><><>

ಜಿ.ಎಲ್.ಜನಾರ್ದನ ಧ್ವನಿ 35 + ಕು.ಅಕ್ಷಿ 20 ಸೆಕೆಂದುಗಳು

<><><>

ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..

(56 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಸ್ವತಂತ್ರ ಭಾರತದ ಪ್ರಥಮ ಗೃಹಮಂತ್ರಿ, ಉಕ್ಕಿನ ಮನುಷ್ಯ ಎಂದೇ ಖ್ಯಾತರಾದ, ಬಾರ್ಡೋಲಿಯ ಸರ್ದಾರ ವಲ್ಲಭಭಾಯಿ ಪಟೇಲ ಅವರ, 150ನೇ ಜಯಂತ್ಯುತ್ಸವದ ಹಿನ್ನೆಲೆ, ಇಂದು ಮತ್ತು ನಾಳೆ, ಬೀದರ್‌ನಲ್ಲಿ 'ಏಕತಾ ನಡಿಗೆ' ಆಯೋಜಿತವಾಗಿದೆ. ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಮಾಹಿತಿ ನೀಡಿ, ಕೇಂದ್ರ ಯುವಜನ ವ್ಯವಹಾರ, ಕ್ರೀಡೆ ಹಾಗೂ ಮೇರಾ ಯುವ ಭಾರತ ಸಹಯೋಗದಲ್ಲಿ, ಎರಡು ಹಂತಗಳಲ್ಲಿ ಏಕತಾ ನಡಿಗೆ ಆಯೋಜಿತವಾಗಿದೆ, ಎಂದರು.

<><><>

ಮೊದಲ ಹಂತದ ಏಕತಾ ನಡಿಗೆ, ಇಂದು ಬೆಳಗ್ಗೆ 8 ಗಂಟೆಗೆ, ಭೂಮರೆಡ್ಡಿ ಮಹಾವಿದ್ಯಾಲಯದಿಂದ ಆರಂಭಗೊಂಡು, ನೆಹರೂ ಕ್ರೀಡಾಂಗಣದಲ್ಲಿ ಕೊನೆಗೊಳ್ಳಲಿದೆ. ಬೆಳಗ್ಗೆ 10 ಗಂಟೆಗೆ, ಪ್ರಧಾನ ಕಾರ್ಯಕ್ರಮ ಜರುಗಲಿದೆ.

<><><>

2ನೇ ಹಂತದ ಏಕತಾ ನಡಿಗೆ, ನಾಳೆ ಶನಿವಾರ ಬೆಳಗ್ಗೆ 8 ಗಂಟೆಗೆ, ಬರೀದ್ ಶಾಹಿ ಮೈದಾನದಿಂದ ಆರಂಭಗೊಂಡು, ರಂಗ ಮಂದಿರದಲ್ಲಿ ಸಮಾರೋಪಗೊಳ್ಳಲಿದ್ದು, ಬೆಳಗ್ಗೆ 10 ಗಂಟೆಗೆ ಸಭಾ ಕಾರ್ಯಕ್ರಮ ನಡೆಯಲಿದೆ.

<><><>

ಬೀದರ ಜಿಲ್ಲೆ, ಯುವ ಕೇಂದ್ರದ ಅಧಿಕಾರಿ, ಮಯೂರ ಗೊರ್ಮೆ ಈ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ.

<><><>

ಮಯೂರ ಗೊರ್ಮೆ ಧ್ವನಿ 31 ಸೆಕೆಂದುಗಳು

<><><>

ಕೇಂದ್ರದ, ನೀತಿ ಆಯೋಗದಿಂದ ಗುರುತಿಸಲ್ಪಟ್ಟ, ಕಲಬುರಗಿ ಜಿಲ್ಲೆಯ ಮಹತ್ವಾಕಾಂಕ್ಷಿ ತಾಲೂಕುಗಳಾದ, ಅಫಜಲಪೂರ, ಶಹಾಬಾದ ಹಾಗೂ ಕಾಳಗಿಯಲ್ಲಿ, ಸುಸ್ಥಿರ ಪ್ರಗತಿ ಸಾಧಿಸಲು, ಹೊಸ ಆಡಳಿತ ಮತ್ತು ಅಭಿವೃದ್ಧಿ ಯೋಜನೆ ಜಾರಿಗೊಳಿಸಿದ್ದಕ್ಕಾಗಿ, ಜಿಲ್ಲಾಧಿಕಾರಿ ಬಿ. ಫೌಜಿಯಾ ತರನ್ನುಮ್ ಅವರನ್ನು, ಆಯೋಗ ಶ್ಲಾಘಿಸಿದೆ. 'ರಾಜ್ಯಗಳಿಗೆ ನೀತಿ–ರಾಜ್ಯ ಬೆಂಬಲಿತ ಮಿ ನ್' ಅಡಿ, ಸಮಗ್ರ ಶಿಕ್ಷಾ

ಅಭಿಯಾನ ಹಾಗೂ ಮಣ್ಣಿನ ಆರೋಗ್ಯದ ಮರುಸ್ಥಾಪನೆ, ಈ ಎರಡು ವಲಯಗಳಲ್ಲಿ, ಕಲಬುರಗಿ ಜಿಲ್ಲೆಯ ಮೂರು ತಾಲೂಕುಗಳಲ್ಲಿ, ಅಸಾಧಾರಣ ಅನುಷ್ಠಾನ ಹಾಗೂ ಉತ್ತಮ ಅಭ್ಯಾಸಗಳನ್ನು ಗುರುತಿಸಿ, ನೀತಿ ಆಯೋಗ, ಮೆಚ್ಚುಗೆ ವ್ಯಕ್ತಪಡಿಸಿದೆ. ನೀತಿ ಆಯೋಗದ ಸಿ.ಇ.ಓ ಮೆಚ್ಚುಗೆಯ ಪ್ರಮಾಣಪತ್ರಗಳನ್ನು ಜಿಲ್ಲಾಧಿಕಾರಿಗೆ ನೀಡಿ, ಅಭಿನಂದಿಸಿದ್ದಾರೆ.

<><><>

ಕಳೆದ ಆಗಸ್ಟ್–2024 ರಲ್ಲಿ, ನೀತಿ ಆಯೋಗ, ಡೆಲ್ಟಾ ರ್‍ಯಾಂಕ್ ಘೋಷಿಸಿತ್ತು. ದಕ್ಷಿಣ ಭಾರತ ವಲಯದಡಿ, ಕಲಬುರಗಿ ಜಿಲ್ಲೆಯ ಕಾಳಗಿ ತಾಲೂಕು, ಎರಡನೇ ರ್‍ಯಾಂಕ್ ಪಡೆದಿತ್ತು.

<><><>

2047ರ ವೇಳೆಗೆ, ದೇಶದ ಎಲ್ಲ ಬಂದರುಗಳಿಂದ, ಒಟ್ಟು 10 ಸಾವಿರ ಮಿಲಿಯನ್ ಮೆಟ್ರಿಕ್ ಟನ್, ಸರಕು ನಿರ್ವಹಣೆಯ ಗುರಿ ಹೊಂದಲಾಗಿದೆ ಎಂದು, ಕೇಂದ್ರ ಬಂದರು, ಹಡಗು ಮತ್ತು ಜಲ ಮಾರ್ಗಗಳ ಖಾತೆ ಸಚಿವ ಸರ್ಬಾನಂದ ಸೋನೋವಾಲ್ ತಿಳಿಸಿದ್ದಾರೆ. ನವ ಮಂಗಳೂರು ಬಂದರು ಪ್ರಾಧಿಕಾರದ, ಸುವರ್ಣ ಮಹೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. 1975 ರಲ್ಲಿ 1 ಲಕ್ಷ ಟನ್ ಸರಕು ನಿರ್ವಹಿಸುತ್ತಿದ್ದ, ನವ ಮಂಗಳೂರು ಬಂದರಿನ ಸಾಮರ್ಥ್ಯ, 2024–25 ರಲ್ಲಿ 46 ಮಿಲಿಯನ್ ಟನ್‌ಗೆ ಏರಿಕೆಯಾಗಿದೆ. ಇದು ವಿಕಸಿತ ಭಾರತದ ದೃಷ್ಟಿಕೋನವನ್ನು ಪ್ರತಿಬಿಂಬಿಸುತ್ತದೆ, ಎಂದರು. ಕೇಂದ್ರ ನವ ಹಾಗೂ ನವೀಕರಿಸಬಹುದಾದ, ಇಂಧನಗಳ ಖಾತೆ ಸಚಿವ, ಪ್ರಲ್ಹಾದ ಜೋಶಿ ಮಾತನಾಡಿ, 2030ರ ವೇಳೆಗೆ, ಭಾರತ ಹಡಗು ನಿರ್ಮಾಣದಲ್ಲಿ, ವಿಶ್ವದ ಮೊದಲ ಹತ್ತು ದೇಶಗಳಲ್ಲಿ, ಸ್ಥಾನ ಪಡೆಯಲಿದೆ ಎಂದರು.

<><><>

ಧಾರವಾಡದ ಭಾರತೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆ, ಟ್ರಿಪಲ್ ಐ.ಟಿ.ಯಲ್ಲಿ, ಆರ್ಟಿಫೀಶಿಯಲ್ ಇಂಟೆಲಿಜೆನ್ಸ್ ಮತ್ತು ಕ್ವಾಂಟಮ್ ಕಂಪ್ಯೂಟಿಂಗ್ ಉತ್ಕೃಷ್ಟತಾ ಕೇಂದ್ರವನ್ನು, ಐದು ವರ್ಷಗಳಲ್ಲಿ ಲೀಪ್ ಅಡಿ, 18 ಕೋಟಿ ರೂಪಾಯಿ ವೆಚ್ಚದಲ್ಲಿ ಸ್ಥಾಪಿಸಲು, ಸಚಿವ ಸಂಪುಟ ಸಭೆ ತೀರ್ಮಾನಿಸಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ, ಬೆಂಗಳೂರಿನಲ್ಲಿ ಸಚಿವ ಸಂಪುಟ ಸಭೆ ಜರುಗಿತು. ಸಂಸದೀಯ ವ್ಯವಹಾರಗಳ ಖಾತೆ ಸಚಿವ, ಎಚ್.ಕೆ. ಪಾಟೀಲ, ಸಭೆಯ ವಿವರ ನೀಡಿ, ಮೀನುಗಾರರು ಹಾಗೂ ದೋಣಿಗಳಸುರಕ್ಷತೆಗಾಗಿ, ಇಸ್ರೋ ಅಭಿವೃದ್ಧಿಪಡಿಸಿದ, ಜಿ.ಪಿ.ಎಸ್. ಸಂವಹನ ವ್ಯವಸ್ಥೆಯನ್ನು. 12 ಸಾವಿರದ 3 ಮೀನುಗಾರಿಕಾ ದೋಣಿಗಳಲ್ಲಿ, ಕೇಂದ್ರದ ಸಹಕಾರದಲ್ಲಿ, 43 ಕೋಟಿ 69 ಲಕ್ಷ ರೂಪಾಯಿ ವೆಚ್ಚದಲ್ಲಿ ಅಳವಡಿಸಲು, ನಿರ್ಣಯಿಸಲಾಗಿದೆ ಎಂದರು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- 72ನೇ ಅಖಿಲ ಭಾರತ ಸಹಕಾರಿ ಸಪ್ತಾಹಕ್ಕೆ, ಇಂದು, ಬೆಂಗಳೂರಿನಲ್ಲಿ, ಮುಖ್ಯಮಂತ್ರಿ ಚಾಲನೆ.
- 'ಪ್ರತಿಯೊಂದು ಮಗುವಿಗೂ, ಎಲ್ಲ ಹಕ್ಕು' ಧ್ಯೇಯದೊಂದಿಗೆ, ಇಂದು, 'ಮಕ್ಕಳ ದಿನಾಚರಣೆ.
- ಸರ್ದಾರ ವಲ್ಲಭಭಾಯಿ ಪಟೇಲ ಅವರ, 150ನೇ ಜಯಂತ್ಯುತ್ಸವ: ಇಂದು ಮತ್ತು ನಾಳೆ, ಬೀದರ್‌ನಲ್ಲಿ 'ಏಕತಾ ನಡಿಗೆ'.
- ಕೇಂದ್ರದ, ನೀತಿ ಆಯೋಗದಿಂದ, ಕಲಬುರಗಿ ಜಿಲ್ಲಾಧಿಕಾರಿ ಬಿ. ಫೌಜಿಯಾ ತರನ್ನುಮ್ ಅವರಿಗೆ, ಪ್ರಶಂಸಾ ಪತ್ರ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.